# ಪ್ರಸವಕ್ಕಾಗಿ ತಯಾರಾಗಿರುವುದು

## ಪರಿಚಯ

- ಪ್ರಸವಕ್ಕಾಗಿ ತಯಾರಾಗಿರುವುದು ಎಂದರೆ ಸುರಕ್ಷಿತವಾದ ಮತ್ತು ಆರಾಮದಾಯಕವಾದ ಹೆರಿಗೆಗಾಗಿ ಗರ್ಭಿಣಿ ಮತ್ತು ಆಕೆಯ ಕುಟುಂಬದವರು ತಯಾರಾಗಿರುವುದಾಗಿದೆ.
- ಪ್ರಸವ ಪೂರ್ವದ ತಪಾಸಣೆ ಭೇಟಿಯ ಸಂದರ್ಭದಲ್ಲಿ ಪ್ರಸವಕ್ಕಾಗಿ ತಯಾರಿ ಯೋಜನೆಯನ್ನು ಸಿದ್ಧಪಡಿಸಬೇಕು.
- ಪ್ರಸವಕ್ಕಾಗಿ ತಯಾರಾಗುವ ಯೋಜನೆಯಲ್ಲಿ ಸಂಪರ್ಕ ಮಾಹಿತಿ, ಅಪಾಯ ಚಿಹ್ನೆಗಳ ಬಗ್ಗೆ ತಿಳುವಳಿಕೆ, ಸಂಚಾರ ಏರ್ಪಾಡುಗಳು, ಗರ್ಭಿಣಿಯ ಮತ್ತು ಮಗುವಿನ ಹೆಲ್ತ್ ಕಾರ್ಡ್, ಹಣಕಾಸು ವ್ಯವಸ್ಥೆ, ಆರೋಗ್ಯ ಸೇವೆಗಾಗಿ ಕೊನೆಯ ಕ್ಷಣದಲ್ಲಿ ಸಿಗುವ ಲಭ್ಯತೆಗಳು ಸೇರಿರುತ್ತವೆ.

### ಆಸ್ಪತ್ರೆಯಲ್ಲೇ ಹೆರಿಗೆ ಆಗುವಂತೆ ಖಚಿತಪಡಿಸಿ



ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ/ಸಹಾಯಕ ನರ್ಸ್/ ಅಂಗನವಾಡಿ ಕಾರ್ಯಕರ್ತೆ ಸಂಪರ್ಕಿಸಿ



ಜನನಿ ಸುರಕ್ಷೆ ಯೋಜನೆ ಸ್ಕೀಮ್‌ಗೆ ಅಥವಾ ನಿಮ್ಮ ಪ್ರದೇಶದಲ್ಲಿ ಅನ್ವಯವಾಗುವ ಇತರ ಸ್ಕೀಮ್‌ನೊಂದಿಗೆ ಸೇರಿ



ಜನನಿ ಸುರಕ್ಷೆ ಯೋಜನೆ ಲಾಭಗಳನ್ನು ಪಡೆಯಿರಿ




ಸಾಕಷ್ಟು ಮುಂಚೆಯೇ ಆಸ್ಪತ್ರೆಯನ್ನು ಗುರುತಿಸಿ



ಸಾಕಷ್ಟು ಮುಂಚೆಯೇ ಸಂಚಾರ ಏರ್ಪಾಡುಗಳನ್ನು ಮಾಡಿ



ಪ್ರಸವದ ಬಳಿಕ 48 ಗಂಟೆಗಳ ವರೆಗೆ ಆಸ್ಪತ್ರೆಯಲ್ಲಿ ಇರುವಂತೆ ಮಾಡಿ

### ಕುಟುಂಬದವರು ಮಾಡಬೇಕಾದ ಕೆಲಸಗಳು

- ಗರ್ಭಿಣಿಯಾಗಿರುವುದು ಖಚಿತವಾದ ಬಳಿಕ ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ/ಸಹಾಯಕ ನರ್ಸ್/ಅಂಗನವಾಡಿ ಕಾರ್ಯಕರ್ತೆ ಸಂಪರ್ಕಿಸಬೇಕು.
- ಸಹಾಯಕ ನರ್ಸ್/ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ/ ಅಂಗನವಾಡಿ ಕಾರ್ಯಕರ್ತೆಗಳ ದೂರವಾಣಿಸಂಖ್ಯೆ ಮತ್ತು ಸಂಪರ್ಕ ವಿವರಗಳು ತಕ್ಷಣವೇ ಸಿದ್ಧವಾಗಿರಬೇಕು.
- ತುರ್ತು ಅಗತ್ಯತೆಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಸಾಕಷ್ಟು ಹಣವನ್ನು ಮುಂಚೆಯೇ ತಯಾರಿ ಮಾಡಿಕೊಳ್ಳಬೇಕು.
- ಸಮೀಪದಲ್ಲಿರುವ ಫೀಲ್ಡ್ ರೆಫರಲ್ ಯುನಿಟ್/ಆಸ್ಪತ್ರೆಯನ್ನು ಮುಂಚಿತವಾಗಿಯೇ ಗುರುತು ಮಾಡಿಕೊಳ್ಳಬೇಕು.
- ಮಹಿಳೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕಾಗಿ ವೇಗವಾದ ಸಂಚಾರ ಏರ್ಪಾಡನ್ನು ತಯಾರು ಮಾಡಿಕೊಳ್ಳಬೇಕು.
- ಸ್ವಚ್ಛವಾದ (ಸಾಕಷ್ಟು ನೀರು ಮತ್ತು ಸಾಬೂನಿನಲ್ಲಿ ತೊಳೆದು ಒಣಗಿಸಿರುವ) ಮತ್ತು ಮೃದುವಾದ ಹತ್ತಿ ಬಟ್ಟೆಗಳಲ್ಲಿ ನವಜಾತ ಶಿಶುವನ್ನು ಮುಚ್ಚಿರಬೇಕು.
- ಒಂದು ವೇಳೆ ಮನೆಯಲ್ಲೇ ಪ್ರಸವವಾಗಿದ್ದಲ್ಲಿ, ಹೆರಿಗೆ ಮಾಡಿಸಬೇಕಾದ ಸ್ಥಳವನ್ನು ಗುರುತಿಸಿ ಮತ್ತು ಆ ಸ್ಥಳವನ್ನು ಮತ್ತು ಅದರ ಸುತ್ತ ಮುತ್ತ ಪ್ರದೇಶವನ್ನು ಸ್ವಚ್ಛವಾಗಿರಿಸಿ ತಯಾರು ಮಾಡಿ.
- ಕೌಶಲ್ಯತೆ ಹೊಂದಿರುವ ಹೆರಿಗೆ ಪರಿಣಿತೆ/ಎ.ಎಸ್.ಎಂ ಮೇಲ್ವಿಚಾರಣೆಯಲ್ಲಿ ಹೆರಿಗೆ ಮಾಡಿಸಬೇಕು.

# ಮನೆಯಲ್ಲೇ ಹೆರಿಗೆಯಾಗುವ ಸಂದರ್ಭದಲ್ಲಿ ಮಾಡಬೇಕಾಗಿರುವ ತಯಾರಿಗಳು




## ಅಂಗನವಾಡಿ ಕಾರ್ಯಕರ್ತೆ ಜವಾಬ್ದಾರಿಗಳು

- ಗರ್ಭಿಣಿಯಾದ 12 ವಾರಗಳ ಒಳಗಾಗಿ ಆಕೆಯನ್ನು ನೋಂದಾಯಿಸಬೇಕು ಮತ್ತು ಮುಂದಿನ ಮೂರು ಪ್ರಸವ ಪೂರ್ವದ ತಪಾಸಣೆಗಳನ್ನು ಒದಗಿಸಬೇಕು.
- ಪ್ರಸವ ಪೂರ್ವದ ತಪಾಸಣೆ ಭೇಟಿಗಳಲ್ಲಿ ಮತ್ತು ಗುಂಪು ಸಭೆಗಳಲ್ಲಿ ಎಲ್ಲಾ ಗರ್ಭಿಣಿಯರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಅಪಾಯ ಸಂಕೇತಗಳ ಬಗ್ಗೆ ವಿವರಿಸಿ ತಿಳಿಸಬೇಕು.
- ಎಲ್ಲಾ ಗರ್ಭಿಣಿಯರಿಗೆ ಅಗತ್ಯವಿರುವ ಪರೀಕ್ಷೆಗಳು/ತಪಾಸಣೆಗಳನ್ನು ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಹಗಲೂ ರಾತ್ರಿ ಎಲ್ಲಾ ದಿನಗಳಲ್ಲೂ ಪ್ರಸವ ಸೇವೆಗಳನ್ನು ಒದಗಿಸಬಲ್ಲ ನಿಮ್ಮ ಗ್ರಾಮದಲ್ಲಿರುವ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಮತ್ತು ಸಂಸ್ಥೆಗಳನ್ನು ಗುರುತಿಸಿಕೊಳ್ಳಬೇಕು.
- ಜನನಿ ಸುರಕ್ಷೆ ಯೋಜನೆ ಅನ್ವಯ ಅರ್ಹ/ಯೋಗ್ಯ ಗರ್ಭಿಣಿಗೆ ಅದರ ಪ್ರಯೋಜನಗಳು ಸಿಗುವಂತೆ ಮಾಡಲು ನೆರವಾಗಬೇಕು.
- ಆಸ್ಪತ್ರೆಯಲ್ಲಿ ಪ್ರಸವ ಮಾಡಿಸುವುದರಿಂದ ಸಿಗುವ ಪ್ರಯೋಜನಗಳನ್ನು ಗರ್ಭಿಣಿಗೆ ಮತ್ತು ಆಕೆಯ ಕುಟುಂಬ ಸದಸ್ಯರಿಗೆ ವಿವರಿಸಿ ಹೇಳಬೇಕು/ಸಲಹೆ ನೀಡಬೇಕು.
- ಆಸ್ಪತ್ರೆಯಲ್ಲಿ ಪ್ರಸವಕ್ಕಾಗಿ ಗರ್ಭಿಣಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು/ಹೋಗಲು ನೆರವಾಗಬೇಕು.
- ಒಂದು ವೇಳೆ ಮನೆಯಲ್ಲೇ ಹೆರಿಗೆ ಮಾಡಿಸುವಂತಿದ್ದಲ್ಲಿ, ಎಲ್ಲಾ ಐದು ಬಗೆಯ ಸ್ವಚ್ಛತೆಯನ್ನು ಖಚಿತಪಡಿಸಬೇಕು.